ದಿಃ 20-09-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.
ಪಾಟೀ ಸವಾಲು: ಅರ್ಜಿದಾರರ ಪರ ವಕೀಲರಿಂದ

ನಾನು 2ನೇ ಪಿಯುಸಿ ವ್ಯಾಸಂಗ ಮಾಡಿರುತ್ತೇನೆ. ದಾವಾ ಆಸ್ತಿಯು ವಾಡಾ ಕಂಪೌಂಡ ಅನಗೋಳದಲ್ಲಿ ಇದೆ. ದಾವಾ ಆಸ್ತಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಇದೆ. ದಾವಾ ಆಸ್ತಿಯಲ್ಲಿ ಹಳೆ ವಾಸದ ಮನೆ ಇದೆ. ದಾವಾ ಆಸ್ತಿ 979 ಚದರ ಅಡಿ ಇದೆ ಎಂದರೆ 1000 ಚದರ ಅಡಿ ಇದೆ ಎಂದು ಸಾಕ್ಷಿ ನುಡಿಯುತ್ತಾರೆ. ದಾವಾ ಆಸ್ತಿ 1000 ಚದರ ಅಡಿ ಎಂದು ತೋರಿಸಲು ನಾನು ಯಾವುದೇ ದಾಖಲೆ ಹಾಜರು ಪಡಿಸಿಲ್ಲ. ಮನೆ ನಂಬರನ ಪ್ರಕಾರ ದಾವಾ ಆಸ್ತಿಯನ್ನು ಗುರುತಿಸಬಹುದು.

ದಾವಾ ಆಸ್ತಿಯ ಪೂರ್ವಕ್ಕೆ ಪ್ರೈವೇಟ ರೋಡ ಇದೆ ಅದನ್ನು ಮಹಾನಗರ ಪಾಲಿಕೆಯವರು ಮಾಡಿರುತ್ತಾರೆ. ದಾವಾ ಆಸ್ತಿಯ ಪಶ್ಚಿಮಕ್ಕೆ ರಸ್ತೆ ಇದೆ, ದಕ್ಷಿಣಕ್ಕೆ ಮಹೇಶ ತಹಶೀಲ್ದಾರ ಇವರ ಆಸ್ತಿ ಇದೆ ಮತ್ತು ಉತ್ತರಕ್ಕೆ ಬೂದರೂಕ ಇವರ ಆಸ್ತಿ ಇದೆ. 1967ರಿಂದ ನನ್ನ ತಂದೆ ದಾವಾ ಆಸ್ತಿಯಲ್ಲಿ ವಾಸವಿದ್ದರು. ದಾವಾ ಆಸ್ತಿಯನ್ನು ನಮಗೆ ವಾಸಿಸಲು ಗಂಗಾರಾಮ ತಹಶೀಲ್ದಾರ ಇವರು ನೀಡಿದ್ದಾರೆ. ಗಂಗಾರಾಮ ತಹಶೀಲ್ದಾರ ಇವರು ನನ್ನ ತಂದೆಯ ಹೆಸರಿಗೆ ಕ್ರಯ ಪತ್ರವಾಗಲಿ, ಅಡಮಾನ ಪತ್ರವಾಗಲಿ ಮಾಡಿ ದಾವಾ ಆಸ್ತಿಯನ್ನು ಕೊಟ್ಟಿಲ್ಲ. ಗಂಗಾರಾಮ ತಹಶೀಲ್ದಾರ ಇವರು ನನ್ನ ತಂದೆಗೆ ದಾವಾ ಆಸ್ತಿಯಲ್ಲಿ ವಾಸಿಸಲು ದಾವಾ ಆಸ್ತಿಯನ್ನು ವಾಸಿಸಲು ನೀಡಿದ್ದರು ಎಂದು ತೋರಿಸಲು ಯಾವುದೇ ದಾಖಲೆ ಹಾಜರುಪಡಿಸಿಲ್ಲ.

ಗಂಗಾರಾಮ ತಹಶೀಲ್ದಾರ ಇವರು ಯಾವ ನಾತೆಯಿಂದ ನನ್ನ ತಂದೆಯವರಿಗೆ ದಾವಾ ಆಸ್ತಿಯನ್ನು ವಾಸಿಸಲು ನೀಡಿದ್ದರು ಎಂದು ವಯಕ್ತಿಕವಾಗಿ ನನಗೆ ಗೊತ್ತಿಲ್ಲ. ನನ್ನ ತಾಯಿ ಹೇಳಿದ್ದಾರೆ ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ. ಗಂಗಾರಾಮ ತಹಶೀಲ್ದಾರ ಇವರ ಮಗ ಪರಶುರಾಮ. ಗಂಗಾರಾಮ ತೀರಿಕೊಂಡ ನಂತರ ಮಹಾನಗರ ಪಾಲಿಕೆ ದಾಖಲೆಗಳಲ್ಲಿ ಅರ್ಜಿದಾರರ ಹೆಸರು ದಾವಾ ಆಸ್ತಿಯ ನಾತೆ ದಾಖಲಾಗಿದೆ ಎಂದರೆ ನಾನು ನೋಡಿಲ್ಲ. ನ್ಯಾಯಾಲಯದಿಂದ ನೋಟಿಸ್ ಬಂದ ನಂತರ ದಾವಾ ಆಸ್ತಿ ಖಾತೆ ಯಾರ ಹೆಸರಿನಲ್ಲಿ ದಾಖಲಾಗಿದೆ ಎಂದು ನಾನು ನೋಡಿಲ್ಲ. ವಕೀಲರಿಗೆ ತಕರಾರು ಸಲ್ಲಿಸುವ ಮುಂಚೆ ಮಹಾನಗರ ಪಾಲಿಕೆಯ ದಾಖಲೆಗಳನ್ನು ಪರೀಶಿಲಿಸಿ ನಂತರ ಮಾಹಿತಿ ಕೊಡಲು ಯಾವುದೇ ಅಡಚಣೆ ಇರಲಿಲ್ಲ.

ಗಂಗಾರಾಮನ ಮಗ ಪರಶುರಾಮ ಯಾವಾಗ ತೀರಿಕೊಂಡ ಎಂದರೆ ಗೊತ್ತಿಲ್ಲ. ಗಂಗಾರಾಮ ತಹಶೀಲ್ದಾರ ಇವರನ್ನು ನಾನು ವಯಕ್ತಿಕವಾಗಿ ನೋಡಿದ್ದೇನೆ . ಗಂಗಾರಾಮ ತಹಶೀಲ್ದಾರ ತೀರಿಕೊಂಡ ನಂತರ ಆತನ ಮಕ್ಕಳ ಹೆಸರು ಮಹಾನಗರ ಪಾಲಿಕೆಯಲ್ಲಿ ದಾವಾ ಆಸ್ತಿಯ ನಾತೆ ಬಂದಿದೆ ಎಂದರೆ ನಾನು ನೋಡಿಲ್ಲ. ನಾವು ತಕರಾರು ಸಲ್ಲಿಸುವ ಮುಂಚೆ ಮಹಾನಗರ ಪಾಲಿಕೆಯ ದಾಖಲೆಗಳನ್ನು ನೋಡಿ ತಕರಾರು ಸಲ್ಲಿಸಲು ಯಾವುದೇ ಅಡಚಣೆ ಇರಲಿಲ್ಲ. ಅರ್ಜಿದಾರರು ದಾವಾ ಆಸ್ತಿಯ ತೆರಿಗೆ ಪಾವತಿಸುತ್ತಾರೆ ಎಂದರೆ ಸರಿಯಲ್ಲ, ನಾನು ಪಾವತಿಸುತ್ತೇನೆ ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ. ಅರ್ಜಿದಾರರು ತೆರಿಗೆ ಪಾವತಿ ಮಾಡಿ ನ್ಯಾಯಾಲಯದ ಮುಂದೆ ಹಾಜರು ಪಡಿಸಿದ ದಾಖಲೆಗಳನ್ನು ನಾನು ನೋಡಿದ್ದೇನೆ. ಮಹಾನಗರ ಪಾಲಿಕೆಗೆ ಅರ್ಜಿದಾರರು 970 ಚದರ ಅಡಿ ಆಸ್ತಿಗೆ ತೆರಿಗೆ ಪಾವತಿಸಿದ್ದಾರೆ ಎಂದರೆ ಸರಿ. ಪರಶುರಾಮ ತೀರಿಕೊಂಡ ನಂತರ ಅರ್ಜಿದಾರರು ಮಾಲ್ಕಿನಾತೆಯಿಂದ ದಾವಾ ಆಸ್ತಿಯನ್ನು ನೋಡಿಕೊಳ್ಳುತ್ತಿದ್ದಾರೆ ನಾವು ಖಬ್ಜೆಯಲ್ಲಿ ಮಾತ್ರ ಇರುತ್ತೇವೆ ಎಂದರೆ ಸರಿಯಲ್ಲ. ನಾವು ಖಬ್ಜೆಯಲ್ಲಿ ಇದ್ದೇವೆ ಮತ್ತು ದಾವಾ ಆಸ್ತಿಯನ್ನು ನಾವೇ ನೋಡಿಕೊಳ್ಳುತಿದ್ದೇವೆ ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ.

ದಾವಾ ಆಸ್ತಿಯ ವಿದ್ಯುತ್ ಶಕ್ತಿ ಸಂಪರ್ಕ ಗಂಗಾರಾಮ ಗಜಾನನ ತಹಶೀಲ್ದಾರ ಇವರ ಹೆಸರಿನಲ್ಲಿ ಇದೆ. ದಾವಾ ಆಸ್ತಿಯಲ್ಲಿ ಬಾಡಿಗೆ ನಾತೆನಿಂದ ಇದ್ದ ಕಾರಣ ನಾನು ವಿದ್ಯುತ್ ಬಿಲ್ಲನ್ನು ತುಂಬುತ್ತೇವೆ ಎಂದರೆ ಸರಿ. ವಿದ್ಯುತ್ ಸಂಪರ್ಕವನ್ನು ನಾವೇ ಪಡೆದಿದ್ದೇವೆ ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ. ನಾನು ಹುಟ್ಟುವುದಕ್ಕಿಂತ ಮುಂಚೆ ಇಂದಲೂ ಸಹ ನನ್ನ ತಂದೆ ವಾಸವಿದ್ದ ದಿನದಿಂದ ದಾವಾ ಆಸ್ತಿಗೆ ವಿದ್ಯುತ್ ಸಂಪರ್ಕ ಇದೆ ಎಂದರೆ ಸರಿ. ನನ್ನ ತಂದೆಯವರು ವಿದ್ಯುತ ಸಂಪರ್ಕ ಕೇಳಿ ಪ್ರಾಧಿಕಾರಕ್ಕೆ ಅರ್ಜಿಸಲ್ಲಿಸಿ ವಿದ್ಯುತ ಸಂಪರ್ಕ ಪಡೆದಿಲ್ಲ ಎಂದರೆ ಸರಿ. ನನ್ನ ತಂದೆಯ ಕಾಲದಿಂದ ಇಲ್ಲಿಯವರೆಗೂ ಮಾಲಿಕರು ಎಂದಿಗೂ ವಿದ್ಯುತ ಸಂಪರ್ಕ ಕಡಿತ ಮಾಡಿಲ್ಲ ಎಂದರೆ ಸರಿ. ಪರಶುರಾಮ ಆಗಲಿ ಅರ್ಜಿದಾರರು ಆಗಲಿ ನನ್ನ ತಂದೆಗೆ ಲೈಸನ್ಸ ಪ್ರಕಾರ ಸ್ವಾಧಿನವನ್ನು ನೀಡಿರುವುದಿಲ್ಲ.

ನನ್ನ ತಂದೆಯವರಿಗಾಗಲಿ ಅರ್ಜಿದಾರರ ತಂದೆಯವರಾಗಲಿ ಅವರ ಜೀವಂತ ಇರುವವರೆಗೂ ಮಾಲಿಕ ಮತ್ತು ಬಾಡಿಗೆದಾರ ಎಂಬ ಸಂಬಂದದಲ್ಲಿ ಯಾವುದೇ ತಕರಾರು ಬಂದಿಲ್ಲ ಎಂದರೆ ನಾವು ಅವರ ಬಾಡಿಗೆದಾರರು ಆಗಿರಲಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ತಂದೆಯವರಿಗೆ ಯಾವ ತಾರೀಖು , ತಿಂಗಳು ಮತ್ತು ವರ್ಷ ದಾವಾ ಆಸ್ತಿಯಲ್ಲಿ ಇರಲು ಕೊಟ್ಟರು ಎಂದರೆ ಗೊತ್ತಿಲ್ಲ. ಪರಶುರಾಮ ಆಗಲಿ ಅಥವಾ ಅವರ ತಂದೆಯಾಗಲಿ ಯಾವ ಆದಾರದ ಮೇಲೆ ನನ್ನ ತಂದೆಯನ್ನು ದಾವಾ ಆಸ್ತಿಯಲ್ಲಿ ವಾಸಿಸಲು ಬಿಟ್ಟರು ಎಂದರೆ ನನ್ನ

ತಂದೆ ತಲಾಟಿ ಎಂದು ವರ್ಗಾವಣೆಯಾಗಿ ಬಂದಾಗ ಗಂಗಾರಾಮ ಇವರು ನನ್ನ ತಂದೆ ಕೆಳಗೆ ಹಳಬರು ಎಂದು ಕೆಲಸ ಮಾಡುತಿದ್ದರು, ಅವರು ನನ್ನದೊಂದು ಮನೆ ಇದೆ ಎಂದು ಕರೆದುಕೊಂಡು ಬಂದು ದಾವಾ ಆಸ್ತಿಯಲ್ಲಿ ಇದ್ದರೆ ಇರಬಹುದು ಎಂದು ನನ್ನ ತಂದೆಗೆ ಹೇಳಿದರು. ನಾನು ಮೇಲೆ ಹೇಳಿದ ರೀತಿ ಗಂಗಾರಾಮ ಇವರು ದಾವಾ ಆಸ್ತಿಯಲ್ಲಿ ಇರಲು ಹೇಳಿದ್ದರು ಎಂದು ತೋರಿಸಲು ದಾಖಲೆ ಇಲ್ಲ.

ಗಂಗಾರಾಮ ಮತ್ತು ಆತನ ಮಗ ಪರಶುರಾಮ ಇವರದು ಅನಗೋಳದಲ್ಲಿ ಪ್ರತಿಷ್ಠಿತ ಕುಟುಂಬ ಎಂದರೆ ಸರಿ. ಅನಗೋಳದ ಹೋಲದಲ್ಲಿ ಕೃಷಿ ಮಾಡುವುದು ಅವರ ಮುಖ್ಯ ಉದ್ಯೋಗ ಆಗಿತ್ತು ಎಂದರೆ ಸರಿ. ಈಗಲೂ ಸಹ ಪರಶುರಾಮನ ಮಕ್ಕಳು ಕೃಷಿ ಮಾಡುತ್ತಾರೆ ಎಂದರೆ ಗೋತ್ತಿಲ್ಲ. ನನ್ನ ತಂದೆಯ ಬಳಿ ಗಂಗಾರಾಮ ಹಳಬರು (village official servant) ಎಂದು ಕೆಲಸ ಮಾಡುತಿದ್ದರು ಎಂದು ತೋರಿಸಲು ದಾಖಲೆ ಇಲ್ಲ. ನನ್ನ ತಂದೆಯ ಬಳಿ ಗಂಗಾರಾಮ ಇವರು ಹಳಬರು (village official servant) ಎಂದು ಕೆಲಸ ಮಾಡುತಿದ್ದರು ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ. ಗಂಗಾರಾಮ ಇವರು ಹಳಬರು ಎಂದು ಕೆಲಸ ಮಾಡುತಿದ್ದರು ಎಂದು ತಹಶೀಲ ಕಛೇರಿಯ ದಾಖಲೆಗಳನ್ನು ಪರೀಶಿಲಿಸಿಲ್ಲ. ಗಂಗಾರಾಮ, ಪರಶುರಾಮ ಮತ್ತು ಆತನ ಮರಣದ ನಂತರ ಅರ್ಜಿದಾರರಿಗೆ ಹಾಗೂ ನಮಗೆ ಮಾಲಿಕ ಮತ್ತು ಬಾಡಿಗೆದಾರ ಎಂಬ ಸಂಬಂದ ಇದ್ದರೂ ಸಹ ಸಂಬಂದ ಇಲ್ಲ ಎಂದು ಸುಳ್ಳು ಹೇಳುತಿದ್ದೇನೆ ಎಂದರೆ ಸರಿಯಲ್ಲ.

ನನ್ನ ತಂದೆಯವರು ಇದ್ದಾಗ ಅವರಿಗೂ ಮತ್ತು ಗಂಗಾರಾಮ ಹಾಗೂ ಪರಶುರಾಮ ಇವರಿಗೆ ಸಂಬಂದ ಚನ್ನಾಗಿ ಇದ್ದುದ್ದರಿಂದ ಬಾಡಿಗೆ ಪಾವತಿಗಳನ್ನು ಪಡೆದುಕೊಳ್ಳುತಿರಲಿಲ್ಲ ಎಂದರೆ ಸರಿಯಲ್ಲ, ನಾವು ಬಾಡಿಗೆದಾರರಾಗಿ ಇರಲಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.ನನ್ನ ತಂದೆ ತೀರಿಕೊಂಡ ನಂತರ ನಾನು ಬಾಡಿಗೆದಾರನಾಗಿ ದಾವಾ ಆಸ್ತಿಯಲ್ಲಿ ವಾಸವಿದ್ದೇನೆ ಎಂದರೆ ಸರಿಯಲ್ಲ. ನಮ್ಮ ತಂದೆಯವರು ತೀರಿಕೊಂಡ ನಂತರ ಯಾವ ಆಧಾರದ ಮೇಲೆ ದಾವಾ ಆಸ್ತಿಯಲ್ಲಿ ಇದ್ದೇವೆ ಎಂದರೆ ನಾನು ಮಾಲಿಕರು ಎಂದು ತಿಳಿದುಕೊಂಡು ಇದ್ದೇವೆ ಎಂದು ಸಾಕ್ಷಿ ನುಡಿಯುತ್ತಾರೆ. ನನ್ನ ತಂದೆ ಜೀವಂತ ಇರುವಾಗ ತಾನೇ ಮಾಲಿಕ ಎಂದು ಗಂಗಾರಾಮ ಅಥವಾ ಪರಶುರಾಮ ಇವರಿಗೆ ಅಥವಾ ಅವರ ಮಕ್ಕಳಿಗೆ ನೋಟಿಸ್ ನೀಡಿರುವುದಿಲ್ಲ.

ನನ್ನ ತಂದೆ 1981ರಲ್ಲಿ ತೀರಿಕೊಂಡರು. ನನ್ನ ತಂದೆ ತೀರಿಕೊಳ್ಳುವ ಮುಂಚೆ ಸುಳೇಬಾವಿ ಗ್ರಾಮದಲ್ಲಿ ಗ್ರಾಮಲೆಕ್ಕಾಧಿಕಾರಿ ಆಗಿದ್ದರು ಮತ್ತು ಕರಡೆಗುದ್ದಿ ಗ್ರಾಮಕ್ಕೆ ಇನಚಾರ್ಜ ಇದ್ದರೂ ಎಂದರೆ ಗೊತ್ತಿಲ್ಲ.

**ಈ ಹಂತದಲ್ಲಿ ಮುಂದುವರೆದ ಸಾಕ್ಷಿಯ ವಾಟೀ ಸವಾಲಿಗೆ ಸಮಯವಕಾಶ ಕೋರಿದ್ದು ನೀಡಲಾಯಿತು.**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ.ಹೇ.ಕೇ ಸರಿಯಿದೆ.**

**3ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**
**ಬೆಳಗಾವಿ.**